ಮೂಲ ದಾವಾ ಸಂಖ್ಯೆ. 127/2018 ಡಿ ಡಬ್ಲ್ಯೂ 2

(ದಿನಾಂಕ 19-11-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣಿಕರಿಸಲಾಯಿತು.)

ಪಾಟೀ ಸವಾಲುಃ ವಾದಿ ಪರ ಶ್ರೀಮತಿ ಎಸ್ ಹೆಚ್ ವಿ ವಕೀಲರಿಂದಃ-

ನಾನು ಪಿಯುಸಿ ವರೆಗೆ ವಿದ್ಯಾಭ್ಯಾಸ ಮಾಡಿದ್ದೇನೆ. ನಾನು ವರದಾಪುರ ಕೆಂಚಟನ ಹಳ್ಳಿ ಹಲಗಾಪುರ ಮರಬ್ಬಿಹಾಳ ಗ್ರಾಮಗಳಲ್ಲಿ ನಾನು ಯಜಮಾನರು ಎಂದರೆ ಸರಿ. ನಾನು ಮೊದಲು ಸಾಕಷ್ಟು ಪಂಚಾಯತಿಗಳನ್ನು ಮಾಡಿದ್ದೇನೆ ಈಗ ಸ್ವಲ್ಪ ಕಡಿಮೆಯಾಗಿದೆ. ನನಗೆ ವಾದಿಯರು ಮತ್ತು ಪ್ರತಿವಾದಿಯರು ನನಗೆ ಅಳಿಯಂದಿರಾಗಬೇಕು. ನಾನು ವರದಾಪುರ ಗ್ರಾಮದ ಹಾವಪ್ಪ ಎಂದರೆ ಪ್ರತಿವಾದಿಯರ ತಂದೆ ಇವರ ಮಗಳನ್ನು ವಿವಾಹವಾಗಿದ್ದೇನೆ. ನನ್ನ ಹೆಂಡತಿಯ ಹೆಸರು ಹುಲಿಗೆಮ್ಮ. ನನ್ನ ಅಳಿಯ ನಿಂಗಪ್ಪ ಇವರಿಗೆ ನನ್ನ ಮಗಳು ರೇಣುಕಮ್ಮ ಇವಳನ್ನು ಕೊಟ್ಟು ವಿವಾಹ ಮಾಡಿದ್ದೇನೆ ಎಂದರೆ ಸರಿ. ನನಗೆ ಹಾವಪ್ಪ ಮರಿಗೋಣೆಪ್ಪ ಇವರ ಮನೆತನದ ಎಲ್ಲಾ ವಿಚಾರ ನನಗೆ ಗೊತ್ತು. ಹಾವಪ್ಪ ಮತ್ತು ಮರಿಗೋಣೆಪ್ಪ ಇವರ ತಂದೆಯ ಹೆಸರು ಮರಿಯಪ್ಪನವರ ಬಸಪ್ಪ. ಹಾವಪ್ಪ ಮತ್ತು ಮರಿಗೋಣೆಪ್ಪ ಇವರ ಕುಟುಂಬಕ್ಕೆ ಎಕರೆ ಜಮೀನು ಇತ್ತು ಅವುಗಳ ಸರ್ವೆ ನಂ ನನಗೆ ಹೇಳಲು ಬರುವುದಿಲ್ಲ. ಆ ಜಮೀನುಗಳು ಅವರ ಪಿತ್ರಾರ್ಜಿತ ಆಸ್ತಿಗಳಾಗಿರುತ್ತವೆ. ನಾನು ವಿವಾಹವಾದಾಗ ಹಾವಪ್ಪ ಮತ್ತು ಗೋಣೆಪ್ಪ ಬೇರೆ ಬೇರೆ ಆಗಿದ್ದರು. ಆ ಸಮಯದಲ್ಲಿ ಅವರ ತಂದೆ ಬಸಪ್ಪ ಜೀವಂತ ಇರಲಿಲ್ಲ. ಅವರು ಎಷ್ಟು ವರ್ಷದ ಹಿಂದೆ ವಿಭಾಗ ಮಾಡಿಕೊಂಡಿದ್ದಾರೆ ಅನ್ನುವುದು ನನಗೆ ಗೊತ್ತಿಲ್ಲ ಅವರು ಹಳೇ ಊರು ಇದ್ದಾಗ ವಿಭಾಗ ಮಾಡಿಕೊಂಡಿರುತ್ತಾರೆ ಎನ್ನುತ್ತಾರೆ. ತಲಾ 13 ವರೆ ಎಕರೆ ಜಮೀನು ಹಾವಪ್ಪ ಮತ್ತು ಗೊಣೆಪ್ಪ ಇವರಿಗೆ ಬಂದಿರುತ್ತವೆ. ಅದರ ಸರ್ವೆ ನಂ ನನಗೆ ಹೇಳಲು ಬರುವುದಿಲ್ಲ. ಸದರಿತಲಾ 13 ವರೆ ಎಕರೆ ಜಮೀನುಗಳ ಕುರಿತು ಅವರಿಬ್ಬರ ಹೆಸರುಗಳಲ್ಲಿ ಪ್ರತ್ಯೇಕವಾಗಿ ದಾಖಲೆಗಳಾಗಿರುತ್ತವೆ. ಮರಿಗೋಣೆಪ್ಪ ಹಾಗೂ ಹಾವಪ್ಪ ಇವರ ಹೆಸರಿಗೆ ದಾಖಲಿರುವ ಜಮೀನುಗಳ ಪಹಣಿಗಳನ್ನು ನಾನು ನೋಡಿಲ್ಲ. ನನ್ನ ಮಾವ ಹಾವಪ್ಪ ವಿದ್ಯಾವಂತರು ಎಂದರೆ ಸರಿ. ನನ್ನ ಸಣ್ಣ ಮಾವ ಗೋಣೆಪ್ಪ ವಿದ್ಯಾಬ್ಯಾಸ ಮಾಡಿರಲಿಲ್ಲ ಎಂರದೆ ಸಾಕ್ಷಿಯು 5 ನೇ ತರಗತಿಯವರೆಗೂ ವಿದ್ಯಾಬ್ಯಾಸ ಮಾಡಿರುತ್ತಾರೆ ಎನ್ನುತ್ತಾರೆ. ಗೋಣೆಪ್ಪ ಇವರಿಗೆ ದುಶ್ಚಟಗಳಿರುತ್ತವೆ ಎಂದೆರ ಸರಿ. ಇಬ್ಬರೂ ಸಹೋದರರ ಮದ್ಯ ವಿಭಾಗ ವಾಗಿರಲ್ಲಿಲ್ಲ ಆದ್ದರಿಂದ ಗೋಣೆಪ್ಪ ಇವರಿಗೆ ಜಮೀನುಗಳ ಕುರಿತು ಆಯ್ಕೆ ಪತ್ರವನು ಬರೆದುಕೊಡುವ ಮತ್ತು ಜಮೀನುನ್ನು ಮಾರಾಟ ಮಾಡುವ ಯಾವುದೇ ಅಧಿಕಾರ ಇರುವುದಿಲ್ಲ ಎಂದೆರ ಸರಿಯಲ್ಲ. ಸದರಿ ಆಯ್ಕೆ ಪತ್ರ ಮತ್ತು ಖರೀದಿ ಪತ್ರ ವನ್ನು ನನ್ನ

ಮಾವ ಹಾವಪ್ಪ ಇವರು ಸೃಷ್ಟಿ ಮಾಡಿಕೊಂಡಿರುತ್ತಾರೆ ಎಂದೆರ ಸುಳ್ಳು. ಪ್ರತಿವಾದಿ 3 ಮತ್ತು 5 ರವರು ತಮ್ಮ ಜಮೀನುಗಳನ್ನು ವಿಭಾಗ ಮಾಡಿಕೊಂಡಿರುತ್ತಾರೆ. ಪೋತಿ ವಾರ್ಸ ಮೂಲಕ ಸದರಿ ಜಮೀನುಗಳು 3 ಮತ್ತು 5 ನೇ ಪ್ರತಿವಾದಿಗಳ ತಾಯಿ ಹೆಸರಿಗೆ ಬರಬೇಕಾಗಿತ್ತು ನಾವೆಲ್ಲರೂ ಸೇರಿ ದಾಖಲೆಗಳನ್ನು ಸೃಷ್ಟಿ ಮಾಡಿ 1993 ರಲ್ಲಿ ಖಾತೆ ಮಾಡಿಸಿರುತ್ತೇವೆ ಎಂದರೆ ಸರಿಯಲ್ಲ. ವಾದಿಯರು ಯಾವ ಯಾವ ಸರ್ವೆಯಲ್ಲಿ ಸಾಗು ಮಾಡುತ್ತಾರೆ ಎಂದರೆ ನನಗೆ ಹೇಳಲು ಬರುವುದಿಲ್ಲ. ಅದೇ ರೀತಿ ಪ್ರತಿವಾದಿಯರು ಸಹ ಯಾವಯಾವ ಸರ್ವೆ ನಂಬರುಗಳಲ್ಲಿ ಸಾಗು ಮಾಡುತ್ತಾರೆ ಅಂತಾ ನನಗೆ ಹೇಳಲು ಬರುವುದಿಲ್ಲ. ನನ್ನ ಸಾಕ್ಷಿ ಪ್ರಮಾಣ ಪತ್ರ ವನ್ನು ನಾನೇ ಹೇಳಿ ಬರೆಸಿರುತ್ತೇನೆ. ಪ್ರತಿವಾದಿಯರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇರುವುದಿಲ್ಲ.
(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತ ಮಾಡಲಾಯಿತು.)

ಓ. ಹೇ. ಕೇ. ಸರಿ ಇದೆ,

ಸಿವಿಲ್ ಜಡ್ಜ ಮತ್ತು ಜೆ ಎಂ ಎಫ್ ಸಿ.,
ಹಗರಿಬೊಮ್ಮನಹಳ್ಳಿ